ಹಿಂದೊಂದು ಕಾಲವಿತ್ತು. ದೊಡ್ಡವನಾದ ಮೇಲೆ ಏನಾಗುತ್ತೀಯೆ ಎಂದು ಕೇಳಿದರೆ, ವೈದ್ಯ, ವಕೀಲ, ಎಂಜಿನಿಯರ್, ಶಿಕ್ಷಕ, ವಿಜ್ಞಾನಿ ಎಂದೆಲ್ಲ ಹೇಳುತ್ತಿದ್ದರು. ಈಗ ಹೈಸ್ಕೂಲು ದಾಟದ ಮಕ್ಕಳಲ್ಲೂ ಕೆಲವರು 'ದೊಡ್ಡವನಾದ ಮೇಲೆ ಏನಾಗುತ್ತೀಯೆ?' ಎಂದು ಕೇಳಿದರೆ, ಎರಡನೇ ಯೋಚನೆಯೇ ಇಲ್ಲದೆ 'ಯೂಟ್ಯೂಬರ್ ಆಗುತ್ತೇನೆ, ರೀಲ್ಸ್ ಮಾಡುತ್ತೇನೆ' ಎಂದುಬಿಡುತ್ತಾರೆ. ಪ್ರಶ್ನೆ ಕೇಳಿದ ಶಿಕ್ಷಕ ಅಥವಾ ಶಿಕ್ಷಕಿ ಈ ಉತ್ತರದಿಂದ ಕಕ್ಕಾಬಿಕ್ಕಿಯಾಗಬೇಕಷ್ಟೆ.

'ಓಪನ್ ಸೋರ್ಸ್' ಎನ್ನುವುದು ಹೊಸಕಾಲದ ಮಂತ್ರ. ಡಿಜಿಟಲ್ ಮುಕ್ತತೆಯ ಈ ರಹದಾರಿಯಲ್ಲಿ ಕಂಟೆಂಟುಗಳ ಉಂಡೆಗಳನ್ನು ಉರುಳಿಸುವವರದ್ದು ಲೈಕು–ಕಾಮೆಂಟುಗಳ ಲೆಕ್ಕಾಚಾರ. ಸಬ್‌ಸ್ಕ್ರೈಬರ್‌ಗಳ ಗಣಿತದಲ್ಲಿ ನಿರತರಾದ ಇಂಥವರಿಗೆ ಯೂಟ್ಯೂಬ್ ವೇದಿಕೆಯಲ್ಲಿ ಕಂಟೆಂಟ್‌ಗಳ ಮಾಯಾಲೋಕ ಸೃಷ್ಟಿಸುವ ದೊಡ್ಡ ಅವಕಾಶ. ಚಂದಾದಾರರ ಸಂಖ್ಯೆ ಏರುತ್ತಾ ಹೋದರೆ, ಹಣ ಬರುವ ದಾರಿಗಳೂ ತಂತಾವೇ ತೆರೆದುಕೊಳ್ಳುತ್ತವೆ. ಹಾಗೆ ಚಂದಾದಾರರು ಹೆಚ್ಚಾಗಬೇಕಾದರೆ, ಅವರಿಗೆ ರುಚಿಸುವ ಕಾರ್ಯಕ್ರಮಗಳನ್ನು ಅಥವಾ ಸರಣಿಗಳನ್ನು ಅಥವಾ ತುಣುಕುಗಳನ್ನು ಯೂಟ್ಯೂಬ್‌ನಲ್ಲಿ ವ್ಯಾಪಕವಾಗಿ ಅಪ್‌ಲೋಡ್ ಮಾಡುತ್ತಲೇ ಇರಬೇಕು.

ರಂಗಭೂಮಿಯ ವಿಸ್ತರಣೆಯಾಗಿ ಗರಿಗೆದರಿದ ಸಿನಿಮಾ ಮಾಧ್ಯಮವು ಕರ್ನಾಟಕದ ಮಟ್ಟಿಗೆ ಉಪಭಾಷೆಗಳನ್ನು ಸರಿಯಾಗಿ ದುಡಿಸಿಕೊಂಡಿಲ್ಲ ಎನ್ನುವ ಆರೋಪವಿದೆ. ಇದಕ್ಕೆ ಪುಷ್ಟಿಯೇನೋ ಎನ್ನುವಂತೆ ಮಂಗಳೂರು ಕನ್ನಡ, ಉತ್ತರ ಕರ್ನಾಟಕದವರ ಆಡುಮಾತನ್ನು ಉಳ್ಳ ಸಿನಿಮಾಗಳು ಎಣಿಕೆಗೆ ಸಿಗದಷ್ಟೇನೂ ಇಲ್ಲ.

ಯೂಟ್ಯೂಬ್‌ನಲ್ಲಿ ಇದೇ ಉತ್ತರ ಕರ್ನಾಟಕದ ಮಾತುಗಾರಿಕೆಗೆ ದೊಡ್ಡ ಮಟ್ಟದ ಸ್ವೀಕೃತಿ ಸಿಕ್ಕಿದೆ. ಬೆಂಗಳೂರಿನ ಮೆಟ್ರೊ ರೈಲಿನಲ್ಲಿ ಕುಳಿತವರು ಕೂಡ ಎವೆಯಿಕ್ಕದೆ ತಮ್ಮದಲ್ಲದ ಭಾಷೆಯ ಮನರಂಜನೆಯನ್ನು ಯೂಟ್ಯೂಬ್ ಚಾನಲ್‌ಗಳಲ್ಲಿ, ಸಾಮಾಜಿಕ ಮಾಧ್ಯಮದ ರೀಲ್ಸ್‌ಗಳಲ್ಲಿ ನೋಡಲಾರಂಭಿಸಿದ್ದಾರೆ.

'ನಾ ಡ್ರೈವರ... ನೀ ನನ್ನ ಲವ್ವರ...' ಎನ್ನುವ ಉತ್ತರ ಕರ್ನಾಟಕದ ಶೈಲಿಯ ಹಾಡಂತೂ ಇನ್ನಿಲ್ಲದಂತೆ ವೈರಲ್ ಆಯಿತು. ಅಷ್ಟೇ ಏಕೆ, ಯೋಗರಾಜ ಭಟ್ ಅವರಂತಹ ಸಿನಿಮಾ ನಿರ್ದೇಶಕರೂ 'ಕರಟಕ ದಮನಕ' ಕನ್ನಡದ ಚಿತ್ರದ 'ಹಿತ್ತಲಕ್ಕ ಕರಿಬ್ಯಾಡ ಮಾವ' ಎಂಬ ಗೀತೆಯನ್ನು ಮಲ್ಲು ನಿಪ್ಪನಾಳ್ ಎನ್ನುವ ಉತ್ತರ ಕರ್ನಾಟಕದ ಯೂಟ್ಯೂಬ್ ಹಾಡುಗಾರನ ಕೈಲಿ ಹಾಡಿಸಿದರು. ಆ ಹಾಡು ಒಂದು ಮಟ್ಟಕ್ಕೆ ಹಿಟ್ ಕೂಡ ಆಯಿತೆನ್ನಿ. 'ನಾ ಡ್ರೈವರ...' ಹಾಡಿನ ಜನಪ್ರಿಯತೆಯ ಹಿಂದಿನ ಕಂಠ ಕೂಡ ಇದೇ ಮಲ್ಲು ನಿಪ್ಪನಾಳ್ ಅವರದ್ದು.

## ಕೋವಿಡ್ ಕಾವಿನಲ್ಲಿ ಹೊರಬಂದ ಪ್ರತಿಭೆಗಳು

ಕೋವಿಡ್ ಕಾಲದಲ್ಲಿ ಯೂಟ್ಯೂಬ್ ಚಾನಲ್‌ಗಳಲ್ಲಿ ಕನ್ನಡದ ಮನರಂಜನೆಯು ವೇಗ ಪಡೆದುಕೊಳ್ಳಲಾರಂಭಿಸಿತು. ಆಗಿನಿಂದ ಸೈಕಲ್ ಹೊಡೆಯುತ್ತಾ, ಈಗ ಛಾಪು ಮೂಡಿಸಿರುವ ಯೂಟ್ಯೂಬರ್‌ಗಳ ಪೈಕಿ ಮಲ್ಲು ಬಾಗಲಕೋಟೆ ಪ್ರಮುಖರು. ಮಲ್ಯಾ ಬಾಗಲಕೋಟೆ ಎಂದು ಅನೇಕರು ಅವರನ್ನು ಪ್ರೀತಿಯಿಂದ ಕರೆಯುವುದೂ ಉಂಟು.

ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದವರು ಮಲ್ಲು ಬಾಗಲಕೋಟೆ. ಕೈಲಿ ಆಗ ಸೆಕೆಂಡ್ ಹ್ಯಾಂಡ್ ಮೊಬೈಲ್ ಇತ್ತು. ಇಂಟರ್ನೆಟ್ ಅವರಿಗೆ ದುಬಾರಿ ಬಾಬತ್ತಾಗಿದ್ದ ಕಾಲಘಟ್ಟ. ಮೊದಲಿಗೆ ಅವರು ಸಣ್ಣಪುಟ್ಟ ವಿಡಿಯೊಗಳನ್ನು, ರೀಲ್ಸ್ ಅನ್ನು ಹವ್ಯಾಸಕ್ಕೆಂದು ಮಾಡಲಾರಂಭಿಸಿದರು. ಒಂದು ನಿಮಿಷದ ಸಣ್ಣ ವಿಡಿಯೊಗಳನ್ನು ಮಾಡಿ, ಖುಷಿಪಡುತ್ತಿದ್ದರು. ಫೇಸ್‌ಬುಕ್‌ನಲ್ಲಿ ಅವರಿಗೆ ಐದು ಸಾವಿರ ಸ್ನೇಹಿತರಿದ್ದರು. ಆ ವಿಡಿಯೊಗಳನ್ನು ಮಾಡುತ್ತಾ ಹೋದಂತೆ ಆತ್ಮವಿಶ್ವಾಸ ಮೂಡಿತು. ನೋಡಿದ ಅನೇಕರು ಪ್ರತಿಕ್ರಿಯಿಸಲು ಆರಂಭಿಸಿದರು. ಲೈಕುಗಳು, ಕಮೆಂಟುಗಳ ಲೆಕ್ಕಾಚಾರ ಶುರುವಾದದ್ದೇ ಆಗ. ಅದರಿಂದ ಸ್ಫೂರ್ತಿ ಪಡೆದ ನಂತರ ದೀರ್ಘಾವಧಿ ವಿಡಿಯೊಗಳನ್ನು ಚಿತ್ರೀಕರಿಸಲು ಆರಂಭಿಸಿದರು. ತಮ್ಮದೇ ಸ್ಕ್ರಿಪ್ಟ್, ತಾವೇ ನಟ. ದ್ವಿಪಾತ್ರಾಭಿನಯವನ್ನೂ ಮಾಡುತ್ತಿದ್ದರು. ಮೊಬೈಲನ್ನು ಸೆಲ್ಫಿ ಸ್ಟಿಕ್‌ಗೆ ಸಿಕ್ಕಿಸಿ, ತಾವೇ ಚಿತ್ರೀಕರಣ ಮಾಡುತ್ತಿದ್ದರು.

ಮನರಂಜನೆಯ ಮೊದಲ ದಾರಿಯಾಗಿ ಅವರಿಗೆ ಕಂಡಿದ್ದು ಆ್ಯಪ್‌ಗಳಲ್ಲಿ 'ಡಬ್‌ಸ್ಮ್ಯಾಷ್' ಮಾಡುವ ಅವಕಾಶ. ಯಾವುದೋ ಸಿದ್ಧ ಸಿನಿಮಾ ಸಂಭಾಷಣೆಗೆ ತುಟಿಚಲನೆ ಹೊಂದಿಸುವ ಈ ವರಸೆಯಲ್ಲಿ ಅವರು ಬೇಗ ಪಳಗಿದರು. ಮೂವತ್ತು ಸೆಕೆಂಡಿನ ಒಂದು ಹಾಸ್ಯದ ವಿಡಿಯೊ ವೈರಲ್ ಆಯಿತು. ಆರೇಳು ವರ್ಷದ ಹಿಂದೆ ಅವರು ಮಾಡಿದ ಎರಡನೇ ವಿಡಿಯೊ ಅದಾಗಿತ್ತು. ಜನರು ಅದನ್ನು ಮೆಚ್ಚಿದ್ದೇ ಹುಮ್ಮಸ್ಸು ಬಂತು.

ಒಂದೂವರೆ ವರ್ಷ ಮಲ್ಲು ಬಾಗಲಕೋಟೆ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಲೇ ವಿಡಿಯೊಗಳನ್ನೂ ಮಾಡುತ್ತಿದ್ದರು. ಆಮೇಲೆ ಜನಪ್ರಿಯತೆಯ ಬಾಗಿಲು ತೆರೆದುಕೊಂಡಿದ್ದೇ, ಕೆಲಸ ಬಿಟ್ಟರು. ಪೂರ್ಣಪ್ರಮಾಣದಲ್ಲಿ ಯೂಟ್ಯೂಬರ್ ಆದರು. ಮುಂಡರಗಿಯಲ್ಲಿ ಎಂಟು ವರ್ಷ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದ ಮಲ್ಲು ಬಾಗಲಕೋಟೆ ನೋಡನೋಡುತ್ತಲೇ ಯೂಟ್ಯೂಬರ್ ಆಗಿ ಬೆಳೆದದ್ದು ಸಿನಿಮೀಯವಾಗಿಯೇ ಕಾಣುತ್ತದೆ.

'ಜವಾರಿ ಜಂಕ್ಷನ್' ಎನ್ನುವ ಯೂಟ್ಯೂಬ್ ಚಾನಲ್‌ನಲ್ಲಿ ಮಲ್ಲು ಹಲವು ಸರಣಿಗಳನ್ನು ಮಾಡಿದ್ದಾರೆ. ಬಿಡಿ ಬಿಡಿ ವಿಡಿಯೊಗಳ ಮೂಲಕವೂ ರಂಜಿಸಿದ್ದಾರೆ. ಒಂದು ಲಕ್ಷ ಚಂದಾದಾರರು ಆ ಚಾನಲ್‌ಗೆ ಆದಮೇಲೆ ಈ





ಮಲ್ಲು ನಿಪ್ಪನಾಳ್